Nature Classrooms
BENGALURU SUSTAINABILITY FORUM
ಮಾಧ್ಯಮ ಅನೇಕ
Maadhyama Aneka

# ಎಕ್ಕೆ ಗಿಡ





ಎಕ್ಕೆ ಗಿಡ ಸಾಮಾನ್ಯವಾಗಿ ರಸ್ತೆಗಳ ಪಕ್ಕದಲ್ಲಿ, ಕುರುಚಲು ಮತ್ತು ಬಯಲು ಪ್ರದೇಶಗಳಲ್ಲಿ ಬೆಳೆಯತ್ತದೆ. ಇದರ ಎಲೆಗಳಲ್ಲಿ ಮತ್ತು ಕಾಂಡದಲ್ಲಿ ಹಾಲಿನಂತಹ ಬಿಳಿ ದ್ರವ ತುಂಬಿರುವುದರಿಂದ, ಇದಕ್ಕೆ ಇಂಗ್ಲಿಷ್ ನಲ್ಲಿ 'ಜೈಂಟ್ ಮಿಲ್ಕ್ ವೀಡ್' ಎಂದು ಹೆಸರು. ಎಕ್ಕೆ ಗಿಡವು ಸಣ್ಣ-ಪುಟ್ಟ ಪ್ರಾಣಿ, ಪಕ್ಷಿ, ಕೀಟಗಳಿಗೆ ಉಪಯೋಗಕಾರಿ.

ಈ ಸಸ್ಯಕ್ಕೆ ಅನೇಕ ಹೆಸರುಗಳಿವೆ: ಇಂಗ್ಲಿಷ್ ನಲ್ಲಿ ಇದು 'ಜೈಂಟ್ ಮಿಲ್ಕ್ ವೀಡ್', ಕನ್ನಡದಲ್ಲಿ 'ಯಕ್ಕ' ಅಥವಾ 'ಎಕ್ಕೆ ಗಿಡ' ಮತ್ತು ಹಿಂದಿಯಲ್ಲಿ 'ಆಕ್.' ನಿಮ್ಮ ನೆರೆಹೊರೆಯಲ್ಲಿ ಈ ಸಸ್ಯವನ್ನು ಏನೆಂದು ಕರೆಯುತ್ತಾರೆ?

ಈ ಗಿಡದ ಬಿಳಿ ದ್ರವವನ್ನು ದೊಡ್ಡ ಪ್ರಮಾಣದಲ್ಲಿ ಸೇವಿಸುವುದು ಮನುಷ್ಯರಿಗೆ ಮತ್ತು ಕೆಲವು ಪ್ರಾಣಿಗಳಿಗೆ ಹಾನಿಕರ. ಈ ದ್ರವ ಚರ್ಮ ಮತ್ತು ಕಣ್ಣುಗಳ ಮೇಲೆ ಬಿದ್ದರೆ ಉರಿಯುಂಟಾಗುತ್ತದೆ. ಇದು ಎಕ್ಕೆ ಗಿಡವು ತನ್ನ ಎಲೆಗಳನ್ನು ತಿನ್ನಲು ಬರುವ ಪ್ರಾಣಿ-ಕೀಟಗಳಿಂದ ರಕ್ಷಿಸಿಕೊಳ್ಳುವ ವಿಧಾನ. ಎಕ್ಕೆ ಗಿಡದ ಎಲೆಗಳನ್ನು, ತೊಗಟೆಯನ್ನು ಮುಟ್ಟಿದ ನಂತರ ಸಾಬೂನು ಮತ್ತು ನೀರಿನಿಂದ ನಿಮ್ಮ ಕೈಗಳನ್ನು ಚೆನ್ನಾಗಿ ತೊಳೆಯಿರಿ.

ಈ ರೀತಿ ಸಸ್ಯಗಳು ತಮ್ಮನ್ನು-ತಾವೇ ಮನುಷ್ಯರಿಂದ, ಪ್ರಾಣಿಗಳಿಂದ ರಕ್ಷಿಸಿಕೊಳ್ಳುವ ಇತರ ವಿಧಾನಗಳನ್ನು ಹೇಳ  ಬಲ್ಲಿರಾ?





### ಎಲೆಗಳು

ಎಕ್ಕೆ ಗಿಡದ ಎಲೆಗಳು ತಿಳಿ ಹಸಿರು ಬಣ್ಣದ, ಅಂಡಾಕಾರದ ಎಲೆಗಳು. ಒಮ್ಮೊಮ್ಮೆ ಪಟ್ಟೆ-ಪಟ್ಟೆ ಕಂಬಳಿಹುಳುಗಳು ಈ ಎಲೆಗಳನ್ನು ತಿನ್ನುತ್ತಿರುವುದನ್ನು ಕಾಣಬಹುದು; ಇವು ಸಾಮಾನ್ಯ ಹುಲಿ ಚಿಟ್ಟೆಯ ಕಂಬಳಿಹುಳುಗಳು. ಈ ಚಿಟ್ಟೆಗಳಿಗೆ ಎಕ್ಕೆ ಗಿಡ 'ಆತಿಥೇಯ ಸಸ್ಯ.' ಅಂದರೆ ಈ ಚಿಟ್ಟೆಗಳು ಎಕ್ಕೆ ಎಲೆಗಳ ಮೇಲೆ ಮೊಟ್ಟೆಗಳನ್ನು ಇಟ್ಟು, ಮರಿಹುಳುಗಳು ಮೊಟ್ಟೆಗಳಿಂದ ಹೊರಬಂದ ಮೇಲೆ ಅವು ಅದೇ ಎಲೆಗಳನ್ನು ಆಹಾರವಾಗಿ ತಿಂದು, ಚಿಟ್ಟೆ ಆಗುವವರೆಗೂ ಅಲ್ಲೇ ಬದುಕುತ್ತವೆ.

ಆ ಚಿಟ್ಟೆಯನ್ನು ಗಮನವಿಟ್ಟು ನೋಡಿ, ಯಾವ ಯಾವ ಬಣ್ಣಗಳಿವೆ? ಆ ಚಿಟ್ಟೆಯ ಹೆಸರಿನಲ್ಲಿ, 'ಹುಲಿ'ಎಂಬ ಪದ  ಯಾಕಿದೆ?

### ಹೂವುಗಳು

ಎಕ್ಕೆ ಹೂವುಗಳ ಬಣ್ಣ ತಿಳಿ ನೇರಳೆ. ಅನೇಕರು ಈ ಹೂವುಗಳು ಕಿರೀಟದಂತೆ ಕಾಣುತ್ತದೆ ಎನ್ನುತ್ತಾರೆ. ಅದಕ್ಕಾಗಿಯೇ ಎಕ್ಕೆ ಗಿಡವನ್ನು ಇಂಗ್ಲಿಷ್ ನಲ್ಲಿ 'ಕ್ರೌನ್ ಫ್ಲವರ್' (ಕಿರೀಟದ ಹೂವು) ಎಂದು ಕೂಡ ಕರೆಯುತ್ತಾರೆ. ಎಕ್ಕೆ ಹೂವನ್ನು ಆಹಾರವಾಗಿ ತಿನ್ನುವ  ಕೀಟಗಳಲ್ಲಿ, ಜೇನುನೊಣಗಳು, ಚಿಟ್ಟೆಗಳು, ಜೀರುಂಡೆಗಳು, ಗುಂಗುರುಗಳು ಮತ್ತು ಕಣಜಗಳು ಮುಖ್ಯವಾದವು, ಸದಾ ಗುಂಯ್ಗುಡ್ಡಿ ಗಲಾಟೆ ಮಾಡುವ, ದೊಡ್ಡ ನೀಲಿಗಪ್ಪು ಬಣ್ಣದ ಬಡಗಿ ಜೇನುನೊಣವೂ ಈ ಕೀಟಗಳಲ್ಲಿ ಸೇರಿದೆ.











### ಹಣ್ಣು ಮತ್ತು ಬೀಜ

ಎಕ್ಕೆ ಗಿಡದ ಹಣ್ಣು ಅಥವಾ ಬೀಜಕೋಶಗಳ ಒಳಗೆ ಸಣ್ಣ, ಚಪ್ಪಟೆಯಾದ ಬೀಜಗಳು ಇರುತ್ತವೆ. ಈ ಬೀಜಗಳು ಅತಿ ಹಗುರವಾಗಿದ್ದು, ಪ್ರತಿ ಬೀಜಕ್ಕೆ ಕೂದಲಿನಂತಹ ನಾರುಗಳ ಬಿಳಿ ಬಾಲವಿರುತ್ತದೆ. ಬೀಜದ ಕೋಶ ಅರಳಿದಾಗ ಈ ಬೀಜಗಳು ಗಾಳಿಯಲ್ಲಿ ಹಗೂರವಾಗಿ ತೇಲಿ ಹೋಗುತ್ತವೆ. ಕೆಲವು ಪಕ್ಷಿಗಳು ಈ ಬಿಳಿ, ತುಪ್ಪುಲಿನಂತಹ ನಾರನ್ನು ತಮ್ಮ ಗೂಡು ಕಟ್ಟಲು ಬಳಸಿ, ತಮ್ಮ ಮರಿಗಳಿಗೆ ಗೂಡು ಮೃದುವಾಗಿರುವಂತೆ ಮಾಡುತ್ತವೆ.

ಎಕ್ಕೆ ಬೀಜ ಸಿಕ್ಕರೆ ಅದನ್ನು ನಿಮ್ಮ ಅಂಗೈಯಲ್ಲಿ ಇರಿಸಿ, ನಿಧಾನವಾಗಿ ಊದಿ, ಗಾಳಿಯಲ್ಲಿ ಹೇಗೆ ತೇಲುತ್ತದೆ ಎಂದು ಗಮನಿಸಿ.





### ಕಾಂಡ ಮತ್ತು ತೊಗಟೆ

ಎಕ್ಕೆ ಗಿಡದ ರಸಭರಿತ ಕಾಂಡಗಳು ಬಲವಾಗಿದ್ದು, ಗಿಡದ ಬುಡದ ಹತ್ತಿರ ಹೆಚ್ಚು ಹರಡಿಕೊಂಡಿರುತ್ತವೆ. ಕಾಂಡವನ್ನು ಅಥವಾ ಎಲೆಯನ್ನು ಮುರಿದಾಗ ಹೊರಬರುವ ದ್ರವವನ್ನು ಗಮನಿಸಿದ್ದೀರಾ? ಸಾಮಾನ್ಯವಾಗಿ, ಕಾಂಡಗಳ ನಡುವೆ ಹೊಳೆಯುವ ನೀಲಿ ಬಣ್ಣದ ಎಕ್ಕೆ ಜೀರುಂಡೆಗಳು, ಬಣ್ಣದ ಮಿಡತೆಗಳು ಅಡಗಿಕೊಂಡಿರುತ್ತವೆ. ಈ ಬಣ್ಣದ ಮಿಡತೆಗಳಿಗೆ ರಸಭರಿತ ಎಕ್ಕೆ ಎಲೆಗಳು ಆಹಾರ. ಈ ಮಿಡತೆ ತನ್ನ ಬಣ್ಣದಿಂದ, ತಾನಿರುವ ಗಿಡವನ್ನು ತಿನ್ನುವುದು ಹಾನಿಕರ ಎಂದು ಎಲೆ ತಿನ್ನುವ ಪ್ರಾಣಿಗಳಿಗೆ  ಎಚ್ಚರಿಸುತ್ತದೆ.

ಎಕ್ಕೆ ಗಿಡದ ಮೇಲೆ,  ಗಿಡಹೇನುಗಳು - ಎಲೆಗಳು ಮತ್ತು ಕಾಂಡಗಳ ಮೇಲೆ ವಾಸಿಸುವ ಸಣ್ಣ ಬಿಳಿ, ಹಳದಿ ಕೀಟಗಳು - ಕಂಡುಬರುವುದು ಸಾಮಾನ್ಯ. ಈ ಕೀಟಗಳ ಹತ್ತಿರ ಕೆಲವು ಇರುವೆಗಳು ಕೂಡ ಕಂಡು ಬರುತ್ತವೆ. ಈ ಇರುವೆಗಳು ಮತ್ತು ಗಿಡಹೇನುಗಳ ಮಧ್ಯೆ ವಿಶಿಷ್ಟ ಸಂಬಂಧವಿದೆ - ಗಿಡಹೇನುಗಳು ಸಸ್ಯದ ರಸವನ್ನು ಹೀರಿ 'ಹನಿಡ್ಯೂ' ಎಂಬ ಸಿಹಿ ತ್ಯಾಜ್ಯವನ್ನು ಹೊರಹಾಕುತ್ತವೆ. ಆ ತ್ಯಾಜ್ಯ ಇರುವೆಗಳ ಆಹಾರ. ಪ್ರತಿಯಾಗಿ, ಇರುವೆಗಳು ಗಿಡಹೇನುಗಳನ್ನು ಬೇರೆ ಕೀಟಗಳು ತಿನ್ನದಂತೆ ನೋಡಿಕೊಂಡು, ರಕ್ಷಿಸುತ್ತವೆ.

ನಿಮ್ಮ ಸುತ್ತಮುತ್ತಲು ಬೆಳೆದಿರುವ ಎಕ್ಕೆ ಗಿಡವನ್ನು ಗಮನಿಸಿ - ಅದರ ಸುತ್ತಲೂ ಕಾಣುವ  ಚಿಕ್ಕ ಅಥವಾ ದೊಡ್ಡ ಪ್ರಾಣಿ, ಕೀಟಗಳು ಯಾವುವು? ಆ ಅತಿಥಿಗಳ ಪಟ್ಟಿ ಮಾಡಿ, ಅಥವಾ ಚಿತ್ರ ಬಿಡಿಸಿ.

ಚಿತ್ರಕಲೆ : ಲಬೊನಿ ರೊಯ್

ಈ ಉತ್ಪನ್ನವು ನೇಚರ್ ಕ್ಲಾಸ್ರೂಮ್ಸ್ ಸೇರಿದೆ CC BY SA 4.0